<u>ದಿನಾಂಕಃ **18-10-2025** ರಂದು ಸಾಕ್ಷಿಯನ್ನು ಕರೆಸಿ**,** ಪ್ರಮಾಣ ವಚನ ಬೋಧಿಸಲಾಯಿತು**.**</u>

<u>ಪಾಟೀ ಸವಾಲು**: 2** ನೇ ಎದುರುದಾರರ ಪರ ಶ್ರೀ**:** ಪಿ**.**ವಿ**.**ಎಂ**.** ವಕೀಲರಿಂದ**:**</u>

2. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಇಸ್ಮಾಯಿಲ್ ಸಾಬ್ ಇವರು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು. 2 ನೇ ಅರ್ಜಿದಾರರ ಮದುವೆ ಆಗಿರಲಿಲ್ಲ. 2 ನೇ ಅರ್ಜಿದಾರರು ಇನ್ನೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 3 ನೇ ಅರ್ಜಿದಾರ ಸಹ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನಾನು ಗೃಹಿಣಿ. ನನಗೆ ಅತ್ತೆ ಮಾವ ಹಾಗೂ ತಂದೆ-ತಾಯಿ ಇರುವುದಿಲ್ಲ. ನನ್ನ ಮದುವೆಯಾಗಿ ಸುಮಾರು 25-30 ವರ್ಷಗಳಾಯಿತು. ನನ್ನ ಗಂಡ ನನ್ನಗಿಂತ 10 ವರ್ಷ ದೊಡ್ಡವನಿದ್ದನು ಎಂದರೆ ಸರಿ.

3 ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ದಿನ ನನ್ನ ಗಂಡ ಚಲಾಯಿಸುತ್ತಿದ್ದ ಇಟೋಸ್ ವಾಹನದ ನಂಬರ್ ನನಗೆ ಹೇಳಲು ಬರುವುದಿಲ್ಲ. ಅಪಘಾತವಾದ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ಹುಮನಾಬಾದಗೆ ಹೋಗುವ ಸಮಯದಲ್ಲಿ ಅಪಘಾತ ಆಗಿರುತ್ತದೆ. ಸದರಿ ವಾಹನದಲ್ಲಿ ನನ್ನ ಗಂಡನ ಜೊತೆ ಇನ್ನೊಬ್ಬರು ಇದ್ದರು. ನನ್ನ ಗಂಡನಿಗೆ ಅಪಘಾತವಾಗಿರುವುದನ್ನು ನೋಡಿ ಅವರ ಜೊತೆ ಇದ್ದವರು ಹೃದಯ ಅಪಘಾತದಿಂದ ತೀರಿಕೊಂಡಿರುತ್ತಾರೆ. ನನ್ನ ಗಂಡನಿಗೆ ಅಪಘಾತ ಪಡಿಸಿದ ವಾಹನ ಯಾವುದು ಮತ್ತು ಸದರಿ ವಾಹನದ ಚಾಲಕ ಯಾರು ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಗಂಡನ ವಾಹನ ಹಾಗೂ ಅಪಘಾತ ಪಡಿಸಿದ ವಾಹನ ಎದುರು-ಬದುರು ಡಿಕ್ಕಿಯಾಗಿರುತ್ತವೆ ಎಂದರೆ ಸರಿ.

4. ನಾನು ಹುಮನಾಬಾದಗೆ ಹೋಗಿರುವುದಿಲ್ಲ. ಅಪಘಾತವಾದ ಸ್ಥಳದಲ್ಲಿ 40 ಅಡಿ ಅಗಲದ ರಸ್ತೆ ಇದೆ ಎಂದರೆ ಸರಿ. ಅಪಘಾತವು ರಸ್ತೆಯ ಮಧ್ಯದಲ್ಲಿ

ಆಗಿದೆ ಎಂದರೆ ಸರಿ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಪೊಲೀಸರು ಎದುರಿನಿಂದ ಬರುತ್ತಿದ್ದ ವಾಹನದ ಚಾಲಕ ಮಧ್ಯಪಾನ ಸೇವನೆ ಮಾಡಿ ವಾಹನ ಚಾಲನೆ ಮಾಡುತ್ತಿದ್ದ ಎಂದು ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಪೊಲೀಸರು ಅಂತಿಮ ವರದಿ ತಪ್ಪಾಗಿ ಸಲ್ಲಿಸಿರುತ್ತಾರೆ ಎಂದು ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ.

5. ನನ್ನ ಗಂಡನಿಗೆ ಪ್ರತಿ ತಿಂಗಳು ರೂ. 25 ರಿಂದ 30 ಸಾವಿರ ಆದಾಯವಿತ್ತು ಮತ್ತು ಅವರಿಗೆ ರೂ.200-300/- ಪ್ರತಿದಿನ ಭತ್ಯೆ ಇತ್ತು. ನನ್ನ ಗಂಡನಿಗೆ ಸದರಿ ಆದಾಯವಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಗಂಡನಿಗೆ ನಾನು ಒಬ್ಬಳೇ ಹೆಂಡತಿ ಎಂದರೆ ಸರಿ. ನನ್ನ ಮಕ್ಕಳ ವಿದ್ಯಾಭ್ಯಾಸ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಬಿ.ಪಿ.ಎಲ್ ಪಡಿತರ ಕಾರ್ಡ್ ಇದೆ ಎಂದರೆ ಸರಿ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ನಾನೇ ಅವರಿಗೆ ಖರ್ಚಿಗೆ ಹಣ ಕೊಡುತ್ತಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

Sd/-
ಶ್ರೀಮತಿ ಶ್ರೀದೇವಿ ದರಬಾರೆ)
ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು, ಬೀದರ.